# ಗದಗದಲ್ಲಿ ಗಾಂಧಿ ನೆನಪಿನ ‘ಸಬರಮತಿ’



**ಕಪ್ಪತ್ತಗುಡ್ಡದ ಅಂಚಿನ ರಮ್ಯ ಪರಿಸರದಲ್ಲಿರುವ ಸಬರಮತಿ ಆಶ್ರಮ ಪ್ರವಾಸಿಗರ ಪಾಲಿಗೆ ಗಾಂಧಿ ನೆನಪುಗಳನ್ನು ಕಟ್ಟಿಕೊಡುವ ಪ್ರಶಾಂತ ತಾಣ. ಈ ಆಶ್ರಮವು ಗುಜರಾತ್‌ನ ಅಹಮದಾಬಾದ್‌ನಲ್ಲಿರುವ ಸಬರಮತಿ ಆಶ್ರಮದ ಪ್ರತಿರೂಪ.**

**ಕೆ.ಎಂ. ಸತೀಶ್ ಬೆಳ್ಳಕ್ಕಿ**

ಗಾಂಧೀಜಿ 1920ರ ನವೆಂಬರ್ 11ರಂದು ಗದಗ ನಗರಕ್ಕೆ ಭೇಟಿ ನೀಡಿದ್ದರು. ಅವರು ಜಿಲ್ಲೆಗೆ ಭೇಟಿ ನೀಡಿದ ಶತಮಾನೋತ್ಸವದ ಸ್ಮರಣಾರ್ಥವಾಗಿ ಇಲ್ಲಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿ ಸಬರಮತಿ ಆಶ್ರಮದ ಪ್ರತಿಕೃತಿ ನಿರ್ಮಿಸಿ, 2020ರ ನವೆಂಬರ್ 11ರಂದು ಲೋಕಾರ್ಪಣೆ ಮಾಡಲಾಗಿದೆ. ಗಾಂಧೀಜಿ ಅವರ ಗ್ರಾಮೀಣಾಭಿವೃದ್ಧಿ ಕಲ್ಪನೆ ಮೇಲೆ ಸ್ಥಾಪನೆಗೊಂಡಿರುವ ಈ ವಿಶ್ವವಿದ್ಯಾಲಯವು ಸಬರಮತಿ ಆಶ್ರಮದ ಮೂಲಕ ಗಾಂಧೀಜಿ ವಿಚಾರಧಾರೆಗಳನ್ನು ಜೀವಂತವಾಗಿಡುವುದರ ಜತೆಗೆ ಅವರು ತಿಳಿಸಿಕೊಟ್ಟು ಹೋದ ಮೌಲ್ಯಗಳನ್ನು ಇಂದಿನ ಯುವಜನರಲ್ಲಿ ಬೆಳೆಸುವ ದೃಷ್ಟಿಯಿಂದ ನಿರಂತರ ಪ್ರಯತ್ನ ಮಾಡುತ್ತಿದೆ.

‘ಗಾಂಧೀಜಿ ಕಲ್ಪನೆಯ ಗ್ರಾಮೀಣಾಭಿವೃದ್ಧಿಯನ್ನು ಭೌತಿಕವಾಗಿ ಹೇಗೆ ತರಬೇಕು ಎಂಬ ಪ್ರಶ್ನೆ ಹುಟ್ಟಿಕೊಂಡಾಗ ಹೊಳೆದಿದ್ದು ಸಬರಮತಿ ಆಶ್ರಮದ ಪ್ರತಿಕೃತಿ ನಿರ್ಮಾಣ. ಗಾಂಧೀಜಿಯವರನ್ನು ಈಗ ನೋಡಲು ಸಾಧ್ಯವಿಲ್ಲ. ಅವರ ವಿಚಾರಗಳನ್ನು ಓದಿಕೊಂಡಾಗ ಮಾತ್ರ ಅವರ ವ್ಯಕ್ತಿತ್ವ ನಮ್ಮ ಕಣ್ಣ ಮುಂದೆ ಬರುತ್ತದೆ. ಗಾಂಧೀಜಿ ಅವರಿಗೆ ಪ್ರಿಯವಾಗಿದ್ದ, ಸದಾಕಾಲ ಪ್ರೇರಣೆ ನೀಡುತ್ತಿದ್ದ ಸ್ಥಳ ಸಬರಮತಿ ಆಶ್ರಮ. ಅದು ಮೂರ್ತ ಸ್ವರೂಪದಲ್ಲಿದ್ದಾಗ ಪರಿಣಾಮ ಜಾಸ್ತಿ ಇರುತ್ತದೆ. ಹಾಗಾಗಿ, ಗಾಂಧೀಜಿ ಮತ್ತು ಅವರ ವಿಚಾರಧಾರೆಗಳನ್ನು ಗುರುತಿಸಲು ವಿಶ್ವವಿದ್ಯಾಲಯದ ಆವರಣದಲ್ಲಿ ಸಬರಮತಿ ಆಶ್ರಮ ಸ್ಥಾಪನೆ ಮಾಡಲಾಗಿದೆ’ ಎನ್ನುತ್ತಾರೆ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ.

ಸಬರಮತಿ ಆಶ್ರಮವು ಪ್ರಾರ್ಥನಾ ಮಂದಿರ, ಕಸ್ತೂರಬಾ ಮಂದಿರ, ನಯೀ ತಾಲೀಮ್ ಮಂದಿರ, ಅಡುಗೆ ಮನೆ ಹಾಗೂ ಗ್ರಂಥಾಲಯವನ್ನು ಒಳಗೊಂಡಿದೆ. ಮೂಲ ಆಶ್ರಮದಲ್ಲಿ ಕಟ್ಟಿಗೆ ಕಂಬಗಳನ್ನು ಬಳಸಲಾಗಿದೆ. ಗದಗ ಪರಿಸರದಲ್ಲಿ ಹೆಚ್ಚಿನ ಗಾಳಿ ಬೀಸುವ ಕಾರಣ ಸ್ಟೀಲ್ ಕಂಬ ಹಾಗೂ ಮೈಕ್ರೋ ಕಾಂಕ್ರೀಟ್ ಟೈಲ್ಸ್ ಬಳಸಲಾಗಿದೆ. ಆಧುನಿಕತೆಗೆ ತಕ್ಕಂತೆ ಇವೆರಡು ಬದಲಾವಣೆಗಳನ್ನು ಹೊರತುಪಡಿಸಿ ಉಳಿದಂತೆ ಯಥಾವತ್ತಾಗಿ ನಿರ್ಮಿಸಲಾಗಿದೆ. ಗಾಂಧೀಜಿಯವರ ಜೀವನಕ್ಕೆ ಸಂಬಂಧಿಸಿದ ಒಂದು ನೂರು ಚಿತ್ರಪಟಗಳನ್ನು ಪ್ರದರ್ಶಿಸಲಾಗಿದೆ.

‘ಸಬರಮತಿ ಆಶ್ರಮ ಜೀವಂತವಾಗಿ ಇರಬೇಕಾದರೆ ಗಾಂಧೀಜಿ ಮೂರ್ತಿ ಬೇಕಿತ್ತು. ಅದಕ್ಕಾಗಿ ಸಾಕಷ್ಟು ಹುಡುಕಾಟ ನಡೆಸಲಾಯಿತು.

### ನನಸಾಗದ ಗಾಂಧಿ ಸ್ಮಾರಕದ ಹಂಬಲ

ಗಾಂಧೀಜಿ ಗದಗಕ್ಕೆ ಭೇಟಿ ನೀಡಿದಾಗ ಬೆಟಗೇರಿಯ ಹೊಸಪೇಟೆ ಚೌಕದಲ್ಲಿ ನಡೆದ ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿ, ಬಳಿಕ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಿದ್ದರು. ಗಾಂಧೀಜಿ ನಿಧನರಾದ ನಂತರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಅವರ ಚಿತಾಭಸ್ಮವನ್ನು ಗದುಗಿಗೆ ತಂದರು. ಗಾಂಧೀಜಿಯವರು ಗದಗಕ್ಕೆ ಭೇಟಿ ನೀಡಿ, ಭಾಷಣ ಮಾಡಿದ ಸ್ಥಳದಲ್ಲಿ ಚಿತಾಭಸ್ಮ ಇರಿಸಿ ಸುತ್ತಲೂ ಕಟ್ಟೆ ಕಟ್ಟಿ ಅದಕ್ಕೆ ನಿತ್ಯವೂ ಪೂಜೆ ಸಲ್ಲಿಸುತ್ತಿದ್ದರು. ಅದು ಈಗಲೂ ಮುಂದುವರಿದಿದೆ. ಮುಂದೆ ಈ ಸ್ಥಳ ಗಾಂಧಿ ಗುಡಿ, ಗಾಂಧಿ ಓಣಿ ಎಂದು ಹೆಸರಾಯಿತು. ಅಲ್ಲೊಂದು ಗಾಂಧಿ ಸ್ಮಾರಕ ನಿರ್ಮಾಣ ಮಾಡಬೇಕು ಎಂಬ ಕೂಗು ಮಾತ್ರ ಈವರೆಗೆ ಈಡೇರಿಲ್ಲ.



ಗಾಂಧಿ ಸತ್ಸಂಗ